

> ನನ್ನದೇ ಆದ ದಾರಿಯನ್ನು ರೂಪಿಸಿಕೊಳ್ಳುವುದಕ್ಕೆ, ನಕಾರಾತ್ಮಕತೆಯಿಂದ ಹೊರಬರುವುದಕ್ಕೆ ಹಲವು ಅವಮಾನಗಳನ್ನು ಎದುರಿಸಬೇಕಾಗಿ ಬಂದಿದೆ. ನಾನು ಅವುಗಳನ್ನೇ ಮೆಟ್ಟಿಲನ್ನಾಗಿಸಿಕೊಂಡು ಮೇಲೇರಿದ್ದೇನೆ, ಮೇಲೇರುತ್ತಿದ್ದೇನೆ.

ಹೇಳುವುದಕ್ಕೂ ತುಂಬಾ ವ್ಯತ್ಯಾಸವಿದೆ. ನನ್ನ ಪ್ರಕಾರ, ಸಾಹಿತ್ಯ ಸ್ಥಳೀಯ ನೆಲೆಯಲ್ಲಿ ರೂಪುಗೊಳ್ಳುತ್ತಾ ಸಾಗಬೇಕು. ಬಹುಶಃ ನನ್ನ ಬಹುಪಾಲು ಬರಹಗಳಲ್ಲಿ ಇದೇ ಮಾದರಿಯಿದೆ.

**◆ ಸೃಜನಶೀಲ ಬರಹಗಾರ ಅಥವಾ ಸಂಶೋಧಕ ಸ್ಥಾಪಿತ ಸಿದ್ಧಾಂತಗಳ ಹಿನ್ನೆಲೆಯಲ್ಲಿ ತನ್ನ ಕೆಲಸವನ್ನು ಮಾಡಬೇಕೆ ಅಥವಾ ಸಿದ್ಧಾಂತಗಳು ಬೇಡವೇ?**

ಬರಹಕ್ಕೆ ಎರಡು ಆಯ್ಕೆಗಳಿರುತ್ತವೆ. ಒಂದು ರೂಪಿತ ಸಿದ್ಧಾಂತವನ್ನಿಟ್ಟುಕೊಂಡು ಮುಂದುವರೆಯುವುದು, ಮತ್ತೊಂದು ಹೊಸ ಸಿದ್ಧಾಂತವನ್ನು ಹುಟ್ಟುಹಾಕುವುದು. ಹೀಗಾಗಿ ಬರಹವೊಂದು ಸೃಷ್ಟಿಗೊಂಡ ಸಂದರ್ಭ, ಸನ್ನಿವೇಶ, ಕಾಲ, ದೇಶಗಳಿಗೆ ಅನುಗುಣವಾಗಿ ಯಾವುದೇ ಸಿದ್ಧಾಂತದ ಚೌಕಟ್ಟಿನೊಳಗೆ ಇರಬಹುದು, ಇಲ್ಲವೇ ಅದು ತನ್ನದೇ ಆದ ಹೊಸ ಸೈದ್ಧಾಂತಿಕ ಲಕ್ಷಣಗಳನ್ನು ರೂಪಿಸಿಕೊಳ್ಳಬಹುದು. ಬರಹ ಹೀಗೆಯೇ ಇರಬೇಕೆಂಬ ನಿಯಮ ಹಾಕುವುದು ಸಮಂಜಸವಲ್ಲ. ಅದು ವಸ್ತುವಿನ ನಿರ್ವಚನಕ್ಕೆ ಹಾಕುವ ಕಡಿವಾಣವಾಗುತ್ತದೆ, ಹಾಗಾಗಬಾರದು.

**◆ ಗಾಂಧಿ ಮತ್ತು ಅಂಬೇಡ್ಕರ್ ತಾತ್ವಿಕತೆಗಳನ್ನು ಮುಖಾಮುಖಿಯಾಗುವಾಗ ತಾವು ಹೇಗೆ ಪ್ರತಿಕ್ರಿಯಿಸುತ್ತೀರಿ?**

ಇವರೀರ್ವರೂ ಈ ನೆಲ ಕಂಡ ಮಾನವೀಯ ಪ್ರಜ್ಞೆಯ ಆತ್ಯಂತಿಕ ಸಂಕೇತಗಳು. ಹಾಗಾಗಿ ಅವರಿಬ್ಬರ ತಾತ್ವಿಕತೆಯನ್ನು ಮುಖಾಮುಖಿಯಾಗಿರುವುದಕ್ಕಿಂತ ಅನುಸಂಧಾನಗೊಳಿಸುವುದು ಒಳಿತೆನಿಸುತ್ತದೆ. ಇಬ್ಬರದೂ ದಾಸ್ಯದಿಂದ ಬಿಡುಗಡೆಗಾಗಿ ನಡೆದ ಹೋರಾಟ. ಸಮಕಾಲೀನ ಚಾರಿತ್ರಿಕ ಒತ್ತಾಸೆಗನುಗುಣವಾಗಿ ಅವರೀರ್ವರ ಆಲೋಚನೆಗಳಲ್ಲಿ ಪೂನಾ ಒಪ್ಪಂದ ಕಾರಣವಾಗಿ ವೈರುಧ್ಯವಿದ್ದುದು ನಿಜ. ಅದನ್ನು ವರ್ತಮಾನದಲ್ಲಿ ವೈರುಧ್ಯವನ್ನಾಗಿ ನೋಡುವ ಅಗತ್ಯವಿಲ್ಲ. ಏಕೆಂದರೆ, ಮಾನವ ಜಾತಿ ಸರ್ವಸಮಾನವಾದ ಸರ್ವೋದಯದ ಅನಂತದೆಡೆಗೆ ಸಾಗಬೇಕೆನ್ನುವುದೇ ಅವರೀರ್ವರ